**ದಿನಾಂಕ 17.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀ ಸವಾಲುಃ 1, 2, 4 ರಿಂದ 6 ಪ್ರತಿವಾದಿ ಪರ RK ವಕೀಲರಿಂದ**

ನನಗೆ ಈಗ 72 ವರ್ಷ ಇರುತ್ತದೆ. ದಾವೆಯನ್ನು ಗುಂಡಮ್ಮ ಭಗಯ್ಯನ ವಿರುದ್ಧ ದಾಖಲು ಮಾಡಿರುತ್ತಾಳೆ. ಭಗಯ್ಯ 4 ವರ್ಷಗಳ ಹಿಂದೆ ಮೃತಪಟ್ಟಿರುತ್ತಾನೆ. ಭಗಯ್ಯನಿಗೆ 2 ಜನ ಸಹೋದರರು ಅವರುಗಳು ಭೀಮರಾಯ ಮತ್ತು ದಂಡಪ್ಪ ಎಂದು ಇರುತ್ತಾರೆ. ದ್ಯಾವಮ್ಮ ಎಂಬ ಒಬ್ಬ ಸಹೋದರಿ ಇರುತ್ತಾಳೆ. ಸದರಿ ಭಗಯ್ಯ ಮತ್ತು ಆತನ ಸಹೋದರರು 40-50 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗದ ಸಮಯದಲ್ಲಿ ನಾನು ಹಾಜರು ಇರಲಿಲ್ಲ. ಸದರಿ ವಿಭಾಗದ ಸಮಯದಲ್ಲಿ ಅವರ ತಂದೆ ಬಾಲಯ್ಯ ಮೃತಪಟ್ಟಿದ್ದರು. ಸದರಿ ವಿಭಾಗ ಮೌಖಿಕವಾಗಿ ಆಗಿರುತ್ತದೆ ಅ ಕುರಿತು ಯಾವುದೇ ದಾಖಲಾತಿ ಬರೆದಿಲ್ಲ. ಸದರಿ ವಿಭಾಗದಲ್ಲಿ ಭೀಮರಾಯನಿಗೆ ನಾಗೋಲಿ ಗ್ರಾಮದ ಸ.ನಂ.52 ರಲ್ಲಿ 11 ಎಕರೆ ಬಂದಿರುತ್ತದೆ. ದಂಡಪ್ಪನ ಭಾಗಕ್ಕೆ ಬುದ್ದಿನ್ನಿ ಗ್ರಾಮದ ಸ.ನಂ.30 ರಲ್ಲಿ 10 ಎಕರೆ ಬಂದಿರುತ್ತದೆ. ಭಗಯ್ಯನ ಭಾಗಕ್ಕೆ ನಾಗೋಲಿ ಗ್ರಾಮದ ಸ.ನಂ.52 ರಲ್ಲಿ 11 ಎಕೆರ ಬಂದಿರುತ್ತದೆ.

ನನ್ನ ಪ್ರಮಾಣ ಪತ್ರದಲ್ಲಿ ದಂಡಪ್ಪನ ಭಾಗಕ್ಕೆ ಸ.ನಂ.30 ರಲ್ಲಿ 10 ಎಕರೆ ಬುದ್ದೀನಿ ಗ್ರಾಮದಲ್ಲಿ ಬಂದಿರುತ್ತದೆ ಎಂದು ಬರೆಸಿರುತ್ತೇನೆ, ನಾಗೋಲಿ ಗ್ರಾಮದಲ್ಲಿ ಬಂದಿರುತ್ತದೆ ಎಂದು ಬರೆಸಿರುವುದಿಲ್ಲ. ಸದರಿ ಜಮೀನುಗಳು ಈಗಲೂ ಭೀಮರಾಯ ದಂಡಪ್ಪ ಮತ್ತು ಭಗಯ್ಯ ಇವರ ಹೆಸರುಗಳಲ್ಲಿ ಇರುತ್ತವೆ. ನಾನು ಪಹಣಿಗಳನ್ನು ನೋಡಿರುತ್ತೇನೆ. ವಿಭಾಗವಾದಾಗಿನಿಂದ ಇಲ್ಲಿವರೆಗೆ ಭಗಯ್ಯನ ಭಾಗಕ್ಕೆ ಬಂದ ಜಮೀನು ಆತನ ಹೆಸರಿನಲ್ಲಿ ಇರುತ್ತದೆ. ಭಗಯ್ಯನ ಹೆಸರಿನಲ್ಲಿ ಮೊದಲಿನಿಂದಲೂ ಪಹಣಿಯಲ್ಲಿ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ದಾವ ಜಮೀನಿನಲ್ಲಿ ಈಗ 7 ಪಹಣಿಗಳು ಇರುತ್ತವೆ ಎಂದರೆ ಸರಿ. 4 ಪಹಣಿಗಳು ಗುಂಡಮ್ಮ ಹೆಸರಿಗೆ ಮತ್ತು 3 ಪಹಣಿಗಳು ಗಂಗಪ್ಪನ ಹೆಸರಿಗೆ ಇರುತ್ತವೆ ಎಂದರೆ ಸುಳ್ಳು ಇರುತ್ತವೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ನನಗೆ ಗೊತ್ತು. ಗುಂಡಮ್ಮಳ ಗಂಡನ ಹೆಸರು ಶಿವಪ್ಪ ಇರುತ್ತದೆ. ಶಿವಪ್ಪನ ತಂದೆ ಹೆಸರು ಭೀಮರಾಯ ಇರುತ್ತದೆ. ಭೀಮರಾಯನ ತಂದೆ ಹೆಸರು ಬಾಲಯ್ಯ ಎಂದೆರ ಸರಿ. ಬಾಲಯ್ಯನ ತಂದೆ ಹೆಸರು ಹನುಮಯ್ಯ ಎಂದರೆ ಸರಿ. ಹನುಮಯ್ಯನಿಗೆ ಇಬ್ಬರು ಮಕ್ಕಳು ಅವರುಗಳು ರಾಚನಗೌಡ ಮತ್ತು ಬಾಲಯ್ಯ ಎಂದರೆ ಸರಿ. ರಾಚನಗೌಡನಿಗೆ ಹನುಮಯ್ಯನ ಎಂಬ ಮಗ ಇದ್ದ ಎಂದರೆ ಸರಿ. ಹನುಮಯ್ಯನ ಮಕ್ಕಳೇ ಗಂಗಪ್ಪ, ಫಕೀರಪ್ಪ ಮತ್ತು ಹನುಮಂತರಾಯ ಎಂದರೆ ಸರಿ.

ದಾವ ಜಮೀನು ಮೊದಲು ಬಾಲಯ್ಯ ತಂದೆ ಹನುಮಯ್ಯನ ಹೆಸರಿಗೆ ಇತ್ತು ಎಂದರೆ ಸರಿಯಲ್ಲ. ಬಾಲಯ್ಯ ತಂದೆ ಹನುಮಯ್ಯ 1 ನೇ ಪ್ರತಿವಾದಿಯ ಗಂಡನ ತಾತ ಎಂದರೆ ಸರಿ. ಬಾಲಯ್ಯನಿಂದ ದಾವ ಜಮೀನು ಆತನ ಮೊಮ್ಮಕ್ಕಳಿಗೆ ಮ್ಯುಟೇಶನ ಆಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲದಂತೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವ ಜಮೀನು ಪೈಕಿ 5 ಎಕರೆ 35 ಗುಂಟೆ 1 ನೇ ಪ್ರತಿವಾದಿ ಗಂಡನ ಹೆಸರಿಗೆ ಮ್ಯುಟೇಶನ ಆಗಿರುತ್ತದೆ ಎಂದರೆ ಸುಳ್ಳು ಇರುತ್ತದೆ ಎಂದು ನುಡಿಯುತ್ತಾರೆ. 5 ಎಕರೆ 36 ಗುಂಟೆ 6 ನೇ ಪ್ರತಿವಾದಿ ಗಂಗಪ್ಪನ ಹೆಸರಿಗೆ ಮ್ಯುಟೇಶನ ಆಗಿರುತ್ತದೆ ಎಂದರೆ ಸರಿಯಲ್ಲ. ಶಿವಪ್ಪನ ಮರಣದ ನಂತರ 1 ನೇ ಪ್ರತಿವಾದಿ ತನ್ನ ಹೆಸರಿಗೆ ಮ್ಯುಟೇಶನ ಮಾಡಿಸಿಕೊಂಡಿರುತ್ತಾಳೆ ಎಂದರೆ ಗೊತ್ತಿಲ್ಲದಂತೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಬಾಲಯ್ಯ ತಂದೆ ಹನುಮಯ್ಯ ದಾವ ಜಮೀನನ್ನು ಸಾಗುವಳಿ ಮಾಡುತ್ತಿದ್ದ ಎಂದರೆ ಸರಿಯಲ್ಲ. ಬಾಲಯ್ಯನ ಮರಣದ ನಂತರ ಆತನ ವಾರಸುದಾರರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವ ಜಮೀನಿಗೆ ವಾದಿಗಳು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಮಕ್ಕಳು ಮತ್ತು ನಮ್ಮ ಮಕ್ಕಳ ನಡುವೆ ಮೊಹರಂ ಹಬ್ಬದಲ್ಲಿ ಜಗಳವಾಗಿ ಠಾಣೆಯಲ್ಲಿ ಪ್ರಕರಣ ದಾಖಲು ಆಗಿರುತ್ತದೆ ಎಂದರೆ ಸರಿ. ಸದರಿ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿದ್ದರಿಂದ ಪ್ರತಿವಾದಿಗಳ ಮೇಲೆ ನನ್ನದು ಸಿಟ್ಟು ಇದುದ್ದರಿಂದ ಅವರ ವಿರುದ್ದ ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ, ದೇವದುರ್ಗ.